ಆಕಾಶವಾಣಿ 26.12.2024

ಪ್ರದೇಶ ಸಮಾಚಾರ ಮಧ್ಯಾಹ್ನ 12ಕ್ಕೆ

ಓದುತ್ತಿರುವವರು: ರವಿ ಕುಲಕರ್ಣಿ ಗುರುವಾರ

<><><>

1. ಇಂದು ಮತ್ತು ನಾಳೆ, ಗಡಿ ಜಿಲ್ಲೆ ಬೆಳಗಾವಿಯ ವೀರಸೌಧ ಹಾಗೂ ಸುವರ್ಣಸೌಧ ಎರಡೂ ಕಡೆಗಳಲ್ಲಿ, 'ಗಾಂಧಿ ಭಾರತ' ವಿಶೇಷ ಕಾರ್ಯಕ್ರಮಗಳನ್ನು, ಪ್ರದೇಶ ಕಾಂಗ್ರೆಸ್ ಸಮಿತಿ ಆಯೋಜಿಸಿದೆ. 1924 ರಲ್ಲಿ ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ, ಟಿಳಕವಾಡಿಯಲ್ಲಿ ಕಾಂಗ್ರೆಸ್ ಸ್ವಾತಂತ್ರ್ಯ ಯೋಧರ ಅಧಿವೇಶನ ನಡೆದಿತ್ತು. ಗಾಂಧೀಜಿ ಅವರು, ಅಧ್ಯಕ್ಷತೆ ವಹಿಸಿದ್ದ ಏಕಮಾತ್ರ ಐತಿಹಾಸಿಕ ಅಧಿವೇಶನಕ್ಕೆ, ಇಂದಿಗೆ 100 ವರ್ಷ ಪೂರ್ಣಗೊಂಡಿದೆ. ಇಂದು ಮಧ್ಯಾಹ್ನ 3 ಗಂಟೆಗೆ, ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ, 'ನವ ಸತ್ಯಾಗ್ರಹ ಬೈಠಕ್' ನಡೆಯಲಿದ್ದು, 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಜಾಥಾ ನಡೆಯಲಿದೆ. ಕಾಂಗ್ರೆಸ್‌ನ 200 ನಾಯಕರು ಪಾಲ್ಗೊಳ್ಳಲಿದ್ದಾರೆ.

<><><>

2. 1924 ರಲ್ಲಿ ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಶತಮಾನೊತ್ಸವದ ಅಂಗವಾಗಿ ಬೆಳಗಾವಿ ಟಿಳಕವಾಡಿಯ ವೀರಸೌಧದಲ್ಲಿ ಮಹಾತ್ಮಾ ಗಾಂಧೀಜಿಯವರ ನೂತನ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಇಂದು ಅನಾವರಣಗೊಳಿಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ನಂತರ ಗಾಂಧೀ ಸ್ಮಾರಕ ಭವನದಲ್ಲಿನ ನವೀಕೃತ ಫೋಟೋ ಗ್ಯಾಲರಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು.

<><><>

3. ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲೂಕಿನ, ಸ್ವಾಮಿ ವಿವೇಕಾನಂದ ಯೂಥ್ ಮೂವ್ಮೆಂಟ್ ಸಂಸ್ಥಾಪಕ, ಖ್ಯಾತ ಅಭ್ಯುದಯ ಚಿಂತಕ ಹಾಗೂ ವೈದ್ಯ ಆರ್. ಬಾಲಸುಬ್ರಮಣ್ಯಂ ವಿರಚಿತ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವ ಕೌಶಲ ಆಧಾರಿತ, 'ಪವರ್ ವಿದಿನ್' ಗ್ರಂಥದ ಲೋಕಾರ್ಪಣೆಯನ್ನು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಇಂದು ಸಂಜೆ 6 ಗಂಟೆಗೆ, ಧಾರವಾಡದ ಆಲೂರು ವೆಂಕಟರಾವ ಸಭಾಭವನದಲ್ಲಿ ನೆರವೇರಿಸಲಿದ್ದಾರೆ.

ಕೃತಿ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಎಸ್.ವಿ.ವಾಯ್.ಎಂ. ಪ್ರಾದೇಶಿಕ ಮುಖ್ಯಸ್ಥ ಜಯಂತ ಕೆ.ಎಸ್.

ಜಯಂತ್ ಕೆ.ಎಸ್. ಧ್ವನಿ 32 ಸೆಕೆಂದುಗಳು

<><><>

4. ಕನ್ನಡಿಗರ ಹೆಮ್ಮೆಯ ಬ್ರ್ಯಾಂಡ್ ಕೆ.ಎಂ.ಎಫ್ ತನ್ನ ನಂದಿನಿ ಉತ್ಪನ್ನಗಳಿಗೆ, ದೇಶವ್ಯಾಪಿ ಮಾರುಕಟ್ಟೆ ಸೃಷ್ಟಿಸಿಕೊಂಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ನಂದಿನಿ ವತಿಯಿಂದ ಪ್ರಥಮ ಬಾರಿಗೆ ತಯಾರಿಸಿದ, ನಂದಿನಿ ವೇ ಪ್ರೋಟಿನ್ ಆಧಾರಿತ, ಇಡ್ಲಿ ಮತ್ತು ದೋಸೆ ಹಿಟ್ಟನ್ನು ಬೆಂಗಳೂರಿನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿ, ಅವರು ಮಾತನಾಡಿದರು.

<><><>

5. ಆಕಾಶವಾಣಿಯ ಮಾಸಿಕ ಜನಪ್ರಿಯ ಕಾರ್ಯಕ್ರಮ, 'ಮನ್ ಕಿ ಬಾತ್' ನಲ್ಲಿ ಇದೇ 29 ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ದೇಶ, ವಿದೇಶಗಳಲ್ಲಿನ ಭಾರತೀಯರೊಂದಿಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನದ ಮಾತಿನ 117ನೇ ಆವೃತ್ತಿಯಾಗಿದ್ದು, ಸಾರ್ವಜನಿಕರು 'ನರೇಂದ್ರ ಮೋದಿ ಆ್ಯಪ್' ಅಥವಾ 'ಮೈ ಗೌವ್ ಓಪನ್ ಫೋರಂ' ನಲ್ಲಿ ನಾಳೆಯವರೆಗೆ, ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ.

<><><>

6. 23 ವರ್ಷಗಳ ಹಿಂದೆ ಕಾಣೆಯಾಗಿದ್ದ, ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ದಣ ನಾಯಕನ ಕೆರೆಯ, ಸಾಕಮ್ಮ ಅವರು, ಸಮಾಜ ಕಲ್ಯಾಣ ಇಲಾಖೆ ಮುತುವರ್ಜಿ, ಸಾಮಾಜಿಕ ಮಾಧ್ಯಮ 'ಎಕ್ಸ್' ಸಹಾಯದಿಂದ ಪತ್ತೆಯಾಗಿ, ಮರಳಿ ತಮ್ಮ ಕುಟುಂಬ ಸೇರಿದ್ದಾರೆ. ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್, ಉತ್ತರಾಖಂಡದ ಹಿರಿಯ ಐಪಿಎಸ್ ಅಧಿಕಾರಿ ರವಿನಂದನ್ ಹಾಗೂ ಸಾಮಾಜಿಕ ಕಾರ್ಯಕರ್ತ ಜಿ.ವಿಜಯಕುಮಾರ ಸಹಕಾರದಲ್ಲಿ, ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯ ಬಾಲ್‌ವಲಿ ಕಲ್ಯಾಣ ಸಭಾ ವೃದ್ಧಾಶ್ರಮದಿಂದ, ಸಾಕಮ್ಮ ಅವರನ್ನು ಕರೆ ತರಲಾಗಿದೆ.

<><><>

7. ರಾಷ್ಟ್ರಕವಿ ಕುವೆಂಪು ಅವರ, 120ನೇ ಜನ್ಮ ದಿನದ ಅಂಗವಾಗಿ, ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು ಕುಪ್ಪಳಿಯ ಕವಿಶೈಲದಲ್ಲಿ, ನಾಡಿದ್ದು 29 ರಂದು, ಕವಿ ನಮನ ಹಾಗೂ ವಿಶ್ವ ಮಾನವ ದಿನಾಚರಣೆ ಆಯೋಜಿಸಲಾಗಿದೆ.

<><><>

8. ಕೊಪ್ಪಳ ವಿಶ್ವವಿದ್ಯಾಲಯದ ಉಪ ಕುಲಪತಿ ಬಿ.ಕೆ.ರವಿ ಅವರ, 'ಮಾಡರ್ನ್ ಮೀಡಿಯಾ; ಇಲೆಕ್ಷನ್ ಆಂಡ್ ಡೆಮಾಕ್ರಸಿ" ಕೃತಿಯ, ಅಂತಾರಾಷ್ಟ್ರೀಯ ಆವೃತ್ತಿಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಾವೇರಿ ನಿವಾಸದಲ್ಲಿ ಬಿಡುಗಡೆ ಮಾಡಿದರು. (126)

<><><>

9. ಹಾವೇರಿ ಜಿಲ್ಲೆ, ಶಿಗ್ಗಾಂವಿ ತಾಲೂಕು ತಿಮ್ಮಾಪುರ ಬೆಳ್ಳಿಗಟ್ಟಿ ಗ್ರಾಮದ ಬಳಿ ಸಂಭವಿಸಿದ ಅಪಘಾತದಲ್ಲಿ, 12 ವರ್ಷದ ಮಗು ಸೇರಿ, ನಾಲ್ವರು ಮೃತಪಟ್ಟಿದ್ದಾರೆ. ಸಚಿವ ಶಿವಾನಂದ ಪಾಟೀಲ, ಸಂಸದ ಬಸವರಾಜ ಬೊಮ್ಮಾಯಿ ಸಂತಾಪ ಸೂಚಿಸಿದ್ದಾರೆ. (21/22)

<><><>

10. ಶಿವಮೊಗ್ಗದ, ಸೋಗಾನೆ ವಿಮಾನ ನಿಲ್ದಾಣದಿಂದ, ಸರಕು ಸಾಗಣೆ ವಿಮಾನಗಳ ಹಾರಾಟಕ್ಕೆ, ಅಗತ್ಯ ಸೌಲಭ್ಯ ಕಲ್ಪಿಸಲು, 50 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಎಂದು, ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದ್ದಾರೆ. (45)

<><><>

11. ಚಿತ್ರದುರ್ಗ ತಾಲೂಕು ಇಂಗಳದಾಳದ, ಚಿನ್ನದ ಗಣಿಗಾರಿಕೆ ಘಟಕವನ್ನು ಪುನಾರಂಭಿಸಲು, ಕೇಂದ್ರ ಗಣಿ ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ, ತಾತ್ವಿಕ ಒಪ್ಪಿಗೆ ನೀಡಿದ್ದಾಗಿ, ಶಾಸಕ ಕೆ.ಸಿ. ವೀರೇಂದ್ರ ತಿಳಿಸಿದ್ದಾರೆ. (44)

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>